# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ46/2014

| **ಚಾಸಾ ಃ** | **1** | **ಪ್ರಾಸಾಃ-** | **1** |
|---|---|---|---|

| | |
|---|---|
| ಹೆಸರು | ವಿಜಯ್ ಕುಮಾರ್ |
| ತಂದೆಯ ಹೆಸರು | ರಾಮಕೃಷ್ಣ ಜಿ.ಕೆ |
| ವಯಸ್ಸು | **34** |
| ಉದ್ಯೋಗ | ಉಪವಲಯ ಅರಣ್ಯಾಧಿಕಾರಿ, ಕರ್ನಾಟಕ ಅರಣ್ಯ ಅಭಿವೃದ್ದಿ ನಿಗಮ ನಿಯಮಿತ ಬೆಂಗಳೂರು |
| ವಿಳಾಸ | ಬೆಂಗಳೂರು |

- - - - - - - - - - - - - - - - - - - - - - - - - - - - - - -

**ದಿಃ23.08.2019ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು **2011** ರಿಂದ **2012** ರ ಜುಲೈ ವರೆಗೆ ಉಪವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಆರೋಪಿತರನ್ನು ನೋಡಿರುತ್ತೇನೆ. ದಿ.**02.03.2012** ರಂದು ರಾತ್ರಿ **11:30** ಗಂಟೆ ಸಮಯದಲ್ಲಿ ಬೇಕುಪ್ಪೆ ಸರ್ಕಲ್ ಬಳಿ ನಮ್ಮ ಸರ್ಕಾರಿ ವಾಹನ ಸಂಖ್ಯೆ ಕೆಎ-**42**-ಜಿ-**4** ರಲ್ಲಿ ನಾನು ಕುಳಿತುಕೊಂಡು ಮತ್ತು ಚಾಸಾ-**2** ರಿಂದ **4** ರವರು ಆ ಜೀಪಿನ ಪಕ್ಕ ನಿಂತುಕೊಂಡು ತಪಾಸಣೆ ಕಾರ್ಯ ಮಾಡುತ್ತಿದ್ದೆವು. ಆ ವೇಳೆಗೆ ಒಂದು ಲಾರಿ ಸಂಖ್ಯೆ ಕೆಎ-**42**-**253** ಕಪ್ಪು ಬಣ್ಣದ ಗ್ರಾನೈಟ್ ನೊಂದಿಗೆ ಕನಕಪುರದ ಕಡೆಗೆ ಏರದಂಪ್ಪನಹಳ್ಳಿ

ಮಾರ್ಗದ ಕಡೆಯಿಂದಿ ಬಂದಿತ್ತು. ನಾವು ಆ ಲಾರಿಯನ್ನು ನಿಲ್ಲಿಸುವಂತೆ ಬ್ಯಾಟರಿ ಬೆಳಕಿನಿಂದ ಸೂಚಿಸಿದ್ದು, ಅದರೆ ಅದನ್ನು ನಿಲ್ಲಿಸದ ಕಾರಣ ನಾವು ಅದನ್ನು ಹಿಂಬಾಲಿಸಿಕೊಂಡು ಬಂದು ಧರ್ಮರಾಯನ ದೇವಸ್ಥಾನದ ಹತ್ತಿರ ಅಡ್ಡಗಟ್ಟಿ ತಡೆದಿರುತ್ತೇವೆ.

ನಂತರ ಚಾಸಾ-3 ಆ ಲಾರಿಯಲ್ಲಿ ಏನು ಇದೆ ಎಂದು ತಪಾಸಣೆ ಮಾಡಲು ಪ್ರಯತ್ನಿಸಿದಾಗ, ಆ ವೇಳೆಗೆ ಒಂದು ಟಾಟಾ ಸುಮೋ ಮತ್ತು ಒಂದು ಕ್ವಾಲೀಸ್ ವಾಹನಗಳಲ್ಲಿ ಬಂದ ಸುಮಾರು 5-6 ಜನರು ಚಾಸಾ-3 ರವರ ಮೇಲೆ ಹಲ್ಲೆ ಮಾಡಿರುತ್ತಾರೆ. ಆ ವೇಳೆಗೆ 1 ನೇ ಆರೋಪಿತ ಪರವಾನಿಗೆಯ ಪ್ರತಿಯನ್ನು ನಮಗೆ ತೋರಿಸಿರುತ್ತಾರೆ. ಆ ಪ್ರತಿಯನ್ನು ನಮಗೆ ಕೊಟ್ಟಿರುವುದಿಲ್ಲ. ಆ ಪರವಾನಗಿಯಲ್ಲಿ ಬಾಚಹಳ್ಳಿ ಮೂಲಕ ಕಲ್ಲನ್ನು ಬೆಂಗಳೂರಿಗೆ ಸಾಗಿಸುವುದಾಗಿ ನಮೂದಿರುತ್ತದೆ.

ಆ ಲಾರಿಯು ಬಂದ ಮಾರ್ಗ ಪರವಾನಿಗೆಯಲ್ಲಿ ನಮೂದು ಇಲ್ಲ ಎಂದು ನಾನು ಹೇಳಿದ್ದು ಮತ್ತು ಚಾಸಾ-3 ರವರಿಗೆ ಹಲ್ಲೆ ಮಾಡುತ್ತಿರುವುದನ್ನು ನಾನು ಪ್ರಶ್ನಿಸಿದ್ದು, ಆ ವಿಷಯಗಳನ್ನು ನನ್ನ ಮೇಲಾಧಿಕಾರಿಗೆ ತಿಳಿಸುವುದಾಗಿ ನಾನು ದೂರವಾಣಿ ಕರೆ ಮಾಡಲು ನನ್ನ ಮೊಬೈಲ್ ನ್ನು ತೆಗೆದುಕೊಂಡಾಗ 1 ನೇ ಆರೋಪಿತ ಆ ಮೊಬೈಲನ್ನು ಕಸಿದುಕೊಂಡು ನೆಲಕ್ಕೆ ಎಸೆದಿರುತ್ತಾರೆ. ಆ ಮೊಬೈಲ್ ಮಾಕ್ಸ್ ಕಂಪನಿಯ ಮೊಬೈಲ್ ಆಗಿರುತ್ತದೆ.

ಸದರಿ ಲಾರಿಯನ್ನು ನಮ್ಮ ಕಚೇರಿಯಲ್ಲಿ ಬಿಡುವಂತೆ ಅವರಿಗೆ ತಿಳಿಸಿದಾಗ, ನಮ್ಮ ಜೀಪಿನ ಕೀಯನ್ನು ಕಸಿದುಕೊಂಡು, ನಮ್ಮನ್ನು ಅಡ್ಡಗಟ್ಟಿ ಹಿಡಿದುಕೊಂಡು, ಆ ಲಾರಿಯನ್ನು ಆರೋಪಿತರು ತೆಗೆದುಕೊಂಡು ಹೋಗಿರುತ್ತಾರೆ. 1 ನೇ ಆರೋಪಿತ ತನ್ನ ಜೇಬಿನಲ್ಲಿದ್ದ ರೂ.4,200/- ಹಣವನ್ನು ನಮ್ಮ ಜೀಪಿನ ಮೇಲೆ ಹಾಕಿರುತ್ತಾರೆ. ಆ ಹಣದಲ್ಲಿ ರೂ. 500 ರ ಮುಖಬೆಲೆಯ 8 ನೋಟುಗಳು ಮತ್ತು ರೂ.100 ರ ಮುಖಬೆಲೆಯ 2 ನೋಟುಗಳು ಇದ್ದವು.

ಕತ್ತಲಲ್ಲಿ ನಮ್ಮ ಕೀ ಯನ್ನು ಹುಡುಕಿ ಸ್ಥಳದಿಂದ ನಮ್ಮ ಜೀಪಿನಲ್ಲಿ ಹೊರಟು ಕನಕಪುರ ಪೊಲೀಸ್ ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು ನಿಪಿ-1(ಎ) ಎಂದು ಗುರುತಿಸಲಾಯಿತು.

ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದು ಬೆಳಿಗ್ಗೆ 11:00 ಗಂಟೆ ವೇಳೆಗೆ ಪಂಚನಾಮವನ್ನು ಘಟನಾ ಸ್ಥಳದಲ್ಲಿ ಜರುಗಿಸಿದ್ದು, ಅವರಿಗೆ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಸ್ಥಳದಲ್ಲಿ ನನ್ನ ಮೊಬೈಲ್‌ನ ಅವಶೇಷಗಳನ್ನು ಜಪ್ತು ಪಡಿಸಲಾಯಿತು. ಸದರಿ ಪಂಚನಾಮವನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು ನಿಪಿ-2(ಎ) ಎಂದುಗುರುತಿಸಲಾಯಿತು.

ನಮ್ಮ ವಿರುದ್ದ ಗಲಾಟೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರಾಗಿರುತ್ತಾರೆ.

ಪೊಲೀಸರು ನನ್ನನ್ನು ವಿಚಾರಿಸಿದ್ದು, ನಾನು ಅವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಸದರಿ ಹಣವನ್ನು ಮತ್ತು ಮೊಬೈಲನ ಅವಶೇಷಗಳನ್ನು ನೋಡಿದರೆ ಗುರುತಿಸಿರುತ್ತೇನೆ.

ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಓ ಹೇ ಕೇ ಪ ಇ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂಃ46/2014**

| **ಚಾಸಾ ಃ** | **2** | **ಪ್ರಾಸಾಃ-** | **2** |
|---|---|---|---|

| | |
|---|---|
| ಹೆಸರು | ವೆಂಕಟೇಶ್ |
| ತಂದೆಯ ಹೆಸರು | ಚಲುವಯ್ಯ |
| ವಯಸ್ಸು | 54 |
| ಉದ್ಯೋಗ | ಅರಣ್ಯ ರಕ್ಷಕರು, ಕನಕಪುರ ವಲಯ |
| ವಿಳಾಸ | ಕನಕಪುರ |

- - - - - - - - - - - - - - - - - - - - - - - - - - - - - - -

**ದಿಃ23.08.2019ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು ಕಳೆದ 25 ವರ್ಷಗಳಿಂದ ಕನಕಪುರ ಅರಣ್ಯ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಸುಮಾರು 7 ವರ್ಷಗಳ ಹಿಂದೆ ಅಂದರೆ 2012 ರಲ್ಲಿ ರಾತ್ರಿ ಸುಮಾರು 9ಃ00 ರಿಂದ 10ಃ00 ಗಂಟೆ ಸಮಯದಲ್ಲಿ ನಾನು ಚಾಲಕನಾಗಿ, ಪ್ರಾಸಾ-1, ಚಾಸಾ-3 ಮತ್ತು 4 ರವರು ಬೇಕುಪ್ಪೆ ಸರ್ಕಲ್ ಬಳಿ ಕಾಯುತ್ತಿದ್ದಾಗ, ಒಂದು ಲಾರಿ ಕೋಡಿಹಳ್ಳಿ ಕಡೆಯಿಂದ ಕನಕಪುರದ ಕಡೆಗೆ ಬಂದಿರುತ್ತದೆ. ಆ ಲಾರಿಯಲ್ಲಿ ಕರಿಕಲ್ಲು ತುಂಬಿದ್ದು, ಅದನ್ನು ನಾವು ಅಡ್ಡಗಟ್ಟಿರುತ್ತೇವೆ. ಆ ಲಾರಿಗೆ ಪರವಾನಿಗೆ ಇದಿಯಾ ಎಂದು ಕೇಳಿದಾಗ ಆ ಪರವಾನಿಗೆಯನ್ನು ಕನಕಪುರದ ರೇಷ್ಮೆಗೂಡಿನ ಮಾರುಕಟ್ಟೆಯ ಹತ್ತಿರ ಕೊಡುವುದಾಗಿ

ಹೇಳಿದರು. ಆ ಲಾರಿಯನ್ನು ನಾವು ಧರ್ಮರಾಯನ ದೇವಸ್ಥಾನದ ಹತ್ತಿರ ನಿಲ್ಲಿಸಿದಾಗ **1** ನೇ ಆರೋಪಿತ ಪರವಾನಗಿಯನ್ನು ತಂದಿದ್ದು, ಆ ಪರವಾನಿಗೆಯು ಬಾಚೇಹಳ್ಳಿದೊಡ್ಡಿಯ ಮಾರ್ಗದ ಪರವಾನಗಿ ಆಗಿತ್ತು. ಆ ಲಾರಿಯನ್ನು ನಮ್ಮ ಕಚೇರಿಗೆ ತರುವಂತೆ ಹೇಳಿದಾಗ, **1** ನೇ ಆರೋಪಿತ ಮತ್ತು ಉಳಿದ **7-8** ಜನರು ನಮ್ಮ ಜೊತೆ ಗಲಾಟೆ ಮಾಡಿದ್ದು, ನಮ್ಮ ಜೀಪಿನ ಕೀಯನ್ನು ಕಿತ್ತು ಎಸೆದಿರುತ್ತಾರೆ. ನಂತರ ಆ ಲಾರಿಯು ಅಲ್ಲಿಂದ ಹೋಗಿರುತ್ತದೆ. ನಂತರ ನಾವು ದೂರನ್ನು ನೀಡಿರುತ್ತೇವೆ.

ಆರೋಪಿತರು ನಮ್ಮನ್ನು ತಳ್ಳಿದ್ದರಿಂದ ನನಗೆ ಮಾತ್ರ ಪೆಟ್ಟಾಗಿರುತ್ತದೆ. ಆ ಲಾರಿಯ ಸಂಖ್ಯೆ ನನಗೆ ನೆನಪಿಲ್ಲ. **1** ನೇ ಆರೋಪಿತನನ್ನು ಈಗ ನೋಡಿ ಗುರುತಿಸಿರುತ್ತೇನೆ. ಉಳಿದ ಆರೋಪಿತರನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ.

**1** ನೇ ಆರೋಪಿತ ಫ್ರಾಸಾ-**1** ರವರ ಮೊಬೈಲನ್ನು ಕಿತ್ತುಕೊಂಡಿರುತ್ತಾರೆ. **1** ನೇ ಆರೋಪಿತ ಮತ್ತು ಅಲ್ಲಿದ್ದ ಇತರರು ಚಾಸಾ-**3** ರವರಿಗೆ ಹೊಡೆದಿರುತ್ತಾರೆ. ಆ ಮೊಬೈಲನ್ನು ನೋಡಿದರೆ ಗುರುತಿಸುತ್ತೇನೆ.

ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢಿಕರೀಸುತ್ತೇನೆ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಓ ಹೇ ಕೇ ಸ ಇ**

## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ46/2014

| | | | |
|---|---|---|---|
| **ಚಾಸಾ ಃ** | **3** | **ಪ್ರಾಸಾಃ-** | **3** |

ಹೆಸರು ರಘು ಎನ್

ತಂದೆಯ ಹೆಸರು ಮಂಜುನಾಥ್

ವಯಸ್ಸು **32**

ಉದ್ಯೋಗ ಉಪವಲಯ ಅರಣ್ಯಾಧಿಕಾರಿ, ಶಿಡ್ಲಘಟ್ಟ

ವಿಳಾಸ ಮೇಲೂರು ಗ್ರಾಮ

- - - - - - - - - - - - - - - - - - - - - - - - - - - - - -

**ದಿಃ23.08.2019ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು **2010** ರಿಂದ **2012** ರ ವರೆಗೆ ಕೋಡಿಹಳ್ಳಿ ಶಾಖೆಯಲ್ಲಿ ಉಪವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.**02.03.2012** ರಂದು ರಾತ್ರಿ **11ಃ00** ಗಂಟೆ ಸಮಯದಲ್ಲಿ ನಮ್ಮ ಮೇಲಾಧಿಕಾರಿಗಳು ಒಂದು ಗ್ರಾನೈಟ್ ಬರುತ್ತಿದ್ದು, ಅದನ್ನು ಹಿಡಿಯಬೇಕು ಎಂದು ನಮಗೆ ಮಾಹಿತಿ ನೀಡಿದ್ದರಿಂದ, ನಾನು, ಪ್ರಾಸಾ-**1, 2** ಮತ್ತು ಚಾಸಾ-**4** ರವರು ಸೇರಿ ನಮ್ಮ ಸರ್ಕಾರಿ ವಾಹನ ಸಂಖ್ಯೆ ಕೆಎ-**42**-ಜಿ-**4** ರಲ್ಲಿ ಬೇಕುಪ್ಪೆ ಸರ್ಕಲ್ ಬಳಿ ಹೋಗಿ ನಾವು ಕಾಯುತ್ತಿದ್ದಾಗ, ಒಂದು ಲಾರಿ ಸಂಖ್ಯೆ ಕೆಎ-**42-253** ಕಪ್ಪು ಬಣ್ಣದ ಗ್ರಾನೈಟ್ ನೊಂದಿಗೆ ಕೋಡಿಹಳ್ಳಿ ಕಡೆಯಿಂದ ಬಂದಿರುತ್ತದೆ. ನಾವು ಆ ಲಾರಿಯನ್ನು ನಿಲ್ಲಿಸುವಂತೆ

ಹೇಳಿದ್ದು, ಅದರೆ ಅದನ್ನು ನಿಲ್ಲಿಸದ ಕಾರಣ ನಾವು ಅದನ್ನು ಧರ್ಮರಾಯನ ದೇವಸ್ಥಾನದ ಹತ್ತಿರ ಅಡ್ಡಗಟ್ಟಿ ತಡೆದಿರುತ್ತೇವೆ.

ಆ ವೇಳೆಗೆ ಒಂದು ಕ್ವಾಲೀಸ್ ವಾಹನದಲ್ಲಿ ಸುಮಾರು 6-7 ಜನರು ಸ್ಥಳಕ್ಕೆ ಬಂದಿರುತ್ತಾರೆ. ಆ ವೇಳೆಗೆ 1 ನೇ ಆರೋಪಿತ ಪರವಾನಿಗೆಯ ಪ್ರತಿಯನ್ನು ಪ್ರಾಸಾ-1 ರವರಿಗೆ ನೀಡಿರುತ್ತಾರೆ. ಆ ಪರವಾನಗಿಯಲ್ಲಿ ಬಾಚಹಳ್ಳಿ ಮಾರ್ಗದ ಮೂಲಕ ಕಲ್ಲನ್ನು ಸಾಗಿಸುವುದಾಗಿ ನಮೂದಿರುತ್ತದೆ.

ಆ ಲಾರಿಯು ಬಂದ ಮಾರ್ಗ ಪರವಾನಿಗೆಯಲ್ಲಿ ನಮೂದು ಇಲ್ಲ ಎಂದು ನಾವು ಆ ಲಾರಿಯನ್ನು ಮತ್ತು ಕಲ್ಲನ್ನು ಜಪ್ತು ಪಡಿಸಲು ನಮ್ಮ ಮೇಲಾಧಿಕಾರಿಗಳಿಗೆ ದೂರವಾಣಿ ಕರೆ ಮಾಡಲು ಪ್ರಯತ್ನಿಸಿದಾಗ, 1 ನೇ ಆರೋಪಿತ ರೂ.4,200/- ಹಣವನ್ನು ನಮ್ಮ ಜೀಪಿನ ಮೇಲೆ ಎಸೆದು ಆ ಲಾರಿಯನ್ನು ಬಿಡುವಂತೆ ನಮಗೆ ದಮ್ಕಿ ಹಾಕಿರುತ್ತಾರೆ. ಪ್ರಾಸಾ-1 ರವರ ಮೊಬೈಲನ್ನು 1 ನೇ ಆರೋಪಿತ ಕಸಿದುಕೊಂಡು ನೆಲಕ್ಕೆ ಎಸೆದಿರುತ್ತಾರೆ. ನನ್ನ ಮೊಬೈಲನ್ನು 1 ನೇ ಆರೋಪಿತ ಕಸಿದುಕೊಂಡು ಸ್ವಿಚ್ ಆಫ್ ಮಾಡಿರುತ್ತಾರೆ. ನಮ್ಮ ಜೀಪಿನ ಕೀ ಯನ್ನು 1 ನೇ ಆರೋಪಿತ ಕಸಿದುಕೊಂಡು ಎಸೆದಿರುತ್ತಾರೆ. ಪ್ರಾಸಾ-2 ರವರ ಮೇಲೆ 1 ನೇ ಆರೋಪಿತ ಹಲ್ಲೆ ಮಾಡಿರುತ್ತಾರೆ.

ಸದರಿ ವಿಷಯವನ್ನು ನಾನು ಮೇಲಾಧಿಕಾರಿಗಳಿಗೆ ತಿಳಿಸಲು ಘಟನಾ ಸ್ಥಳದ ಪಕ್ಕದಲ್ಲಿದ್ದ ನನ್ನ ಕಚೇರಿಗೆ ಬಂದಿರುತ್ತೇನೆ. 1 ನೇ ಆರೋಪಿತ ನನ್ನ ಮೇಲೆ ಹಲ್ಲೆ ಮಾಡಿರುತ್ತೇನೆ.

ನಮ್ಮ ವಿರುದ್ದ ಗಲಾಟೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರಾಗಿರುತ್ತಾರೆ.

ಪ್ರಾಸಾ-1 ರವರಿಂದ ಕಸಿದುಕೊಂಡ ಮೊಬೈಲನ್ನು ಮತ್ತು ಸದರಿ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಆ ಮೊಬೈಲ್ ಮೈಕ್ರೋ ಮಾಕ್ಸ್ ಕಂಪನಿಗೆ ಸೇರಿರುತ್ತದೆ.

ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಓ ಹೇ ಕೇ ಸ ಇ**

# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ46/2014

| | | | |
|---|---|---|---|
| **ಚಾಸಾ ಃ** | **4** | **ಪ್ರಾಸಾಃ-** | **4** |

ಹೆಸರು ವಾಸು ಎನ್

ತಂದೆಯ ಹೆಸರು ನರಸಿಂಹಮೂರ್ತಿ

ವಯಸ್ಸು **28**

ಉದ್ಯೋಗ ಉಪವಲಯ ಅರಣ್ಯಾಧಿಕಾರಿ, ರಾಮನಗರ

ವಿಳಾಸ ರಾಮನಗರ

- - - - - - - - - - - - - - - - - - - - - - - - - - - - - - -

**ದಿಃ23.08.2019ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು 2010 ರಿಂದ 2010 ರ ವರೆಗೆ ಕನಕಪುರದ ವಲಯದಲ್ಲಿ ಅರಣ್ಯ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.02.03.2012 ರಂದು ರಾತ್ರಿ 11ಃ30 ಗಂಟೆ ಸಮಯದಲ್ಲಿ ಏರಂದಪ್ಪನಹಳ್ಳಿಯಿಂದ ಕನಕಪುರದ ಕಡೆಗೆ ಪರವಾನಿಗೆ ಇಲ್ಲದ ಕಲ್ಲು ತುಂಬಿದ ಲಾರಿ ಬರುತ್ತಿದೆ ಎಂದು ನಮ್ಮ ಮೇಲಾಧಿಕಾರಿಗಳು ನಮಗೆ ಮಾಹಿತಿ ನೀಡಿದ್ದು, ನಾನು ಮತ್ತು ಪ್ರಾಸಾ-1 ರಿಂದ 3 ರವರು ನಮ್ಮ ಜೀಪಿನಲ್ಲಿ ಬೇಕುಪ್ಪೆ ಸರ್ಕಲ್ ಬಳಿ ಹೋಗಿ ಕಾಯುತ್ತಿದ್ದಾಗ, ಒಂದು ಲಾರಿ ಸಂಖ್ಯೆ ಕೆಎ-42-253 ಕಲ್ಲಿನೊಂದಿಗೆ ಕೋಡಿಹಳ್ಳಿ ಕಡೆಯಿಂದ ಬಂದಿರುತ್ತದೆ. ನಾವು ಆ ಲಾರಿಯನ್ನು ನಿಲ್ಲಿಸುವಂತೆ ಸೂಚಿಸಿದ್ದು, ಆದರೆ ಅದನ್ನು ನಿಲ್ಲಿಸದ ಕಾರಣ ನಾವು ಅದನ್ನು

ಹಿಂಬಾಲಿಸಿಕೊಂಡು ಬಂದು ಧರ್ಮರಾಯನ ದೇವಸ್ಥಾನದ ಹತ್ತಿರ ಅಡ್ಡಗಟ್ಟಿ ತಡೆದಿರುತ್ತೇವೆ.

ಆ ಲಾರಿಯ ಪರವಾನಗಿಯನ್ನು ಕೇಳಿದ್ದು, ಆ ಲಾರಿಯವರು ಪರವಾನಗಿಯನ್ನು ತೋರಿಸಿರುತ್ತಾರೆ. ಅವರಲ್ಲಿ 1 ನೇ ಆರೋಪಿತ ಇದ್ದರು. ಉಳಿದ 5-6 ಜನರು ಇದ್ದರು. ಆ ಪರವಾನಗಿಯಲ್ಲಿ ಬಾಚಹಳ್ಳಿ ಮೂಲಕ ಕಲ್ಲನ್ನು ಸಾಗಿಸುವುದಾಗಿ ನಮೂದಿರುತ್ತದೆ.

ಆ ಲಾರಿಯು ಬಂದ ಮಾರ್ಗ ಪರವಾನಿಗೆಯಲ್ಲಿ ನಮೂದು ಇರದ ಕಾರಣ ನಾವು ಆ ಲಾರಿಯನ್ನು ಪರಿಶೀಲಿಸಲು ಪ್ರಯತ್ನಿಸಿದಾಗ, ಆರೋಪಿತರು ನಮ್ಮ ಜೊತ ಗಲಾಟೆ ಮಾಡಿರುತ್ತಾರೆ. 1 ನೇ ಆರೋಪಿತ ಪ್ರಾಸಾ-3 ರವರ ಮೇಲೆ ಹಲ್ಲೆ ಮಾಡಿರುತ್ತಾರೆ. 1 ನೇ ಆರೋಪಿತನ ಸಂಗಡಿಗರು ನನ್ನ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದಾಗ ನಾನು ಅಲ್ಲಿಂದ ಓಡಿ ಹೋಗಿರುತ್ತೇನೆ.

ನಂತರ ಆರೋಪಿತರ ವಿರುದ್ದ ದೂರನ್ನು ನೀಡಲಾಯಿತು. ನಮ್ಮ ವಿರುದ್ದ ಗಲಾಟೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರಾಗಿರುತ್ತಾರೆ.

ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದು ಬೆಳಿಗ್ಗೆ 10:30 ರಿಂದ 11:00 ಗಂಟೆ ವೇಳೆಗೆ ಪಂಚನಾಮವನ್ನು ಘಟನಾ ಸ್ಥಳದಲ್ಲಿ ಜರುಗಿಸಿದ್ದು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಪೊಲೀಸರಿಗೆ ಸ್ಥಳವನ್ನು ನಾವು ತೋರಿಸಿರುತ್ತೇನೆ. ಸದರಿ ಪಂಚನಾಮವನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಆ ಪಂಚನಾಮವನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದುಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಓ ಹೇ ಕೇ ಸ ಇ**

## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ46/2014

| | | | |
|---|---|---|---|
| **ಚಾಸಾ ಃ** | **7** | **ಪ್ರಾಸಾಃ-** | **5** |
| ಹೆಸರು | ದೀಲಿಪ್ | | |
| ತಂದೆಯ ಹೆಸರು | ನಾಗಲಿಂಗ | | |
| ವಯಸ್ಸು | **26** | | |
| ಉದ್ಯೋಗ | ಖಾಸಗಿ ಕೆಲಸ | | |
| ವಿಳಾಸ | ಮಳಗಾಳು, ಕನಕಪುರ | | |

- - - - - - - - - - - - - - - - - - - - - - - - - - - - - -

**ದಿಃ23.08.2019ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ಚಾಸಾ-6 ರವರ ಪರಿಚಯವಿದೆ.

ಪೊಲೀಸರು ನನ್ನನ್ನು ಪಂಚನಾಗಿ ಕರೆದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮವನ್ನು ಜರುಗಿಸಿಲ್ಲ ಮತ್ತು ಏನನ್ನು ಜಪ್ತಿಪಡಿಸಿಲ್ಲ. ನನಗೆ ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಆ ಸಹಿಯನ್ನು ಸುಮಾರು 6 ವರ್ಷಗಳ ಹಿಂದೆ ಕನಕಪುರ ಪುರ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ.

ಸಾಕ್ಷಿಯ ಸಹಿ ಇರುವ ದಾಖಲೆಯು ಪಂಚನಾಮವಾಗಿದ್ದು, ಅದನ್ನು ನಿಪಿ-3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ನಿಪಿ-3 ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಎಪಿಪಿ ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.**

**ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿನಾಂಕ.08.03.2012 ರಂದು ಸಂಜೆ 5ಃ00 ರಿಂದ 5ಃ30 ಗಂಟೆ ಸಮಯದಲ್ಲಿ ಕನಕಪುರ ಪುರ ಪೊಲೀಸ್ ಠಾಣೆಯಲ್ಲಿ ಪೋಲೀಸರು ನಿಪಿ-3 ರಂತೆ ಪಂಚನಾಮ ಕ್ರಮ ಜರುಗಿಸಿ ಲಾರಿ ಸಂಖ್ಯೆ ಕೆಎ-42-253 ನ್ನು ಜಪ್ತು ಪಡಿಸಿರುತ್ತಾರೆಂದರೆ ಸರಿಯಲ್ಲ.

ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ ಇರುವುದಿಲ್ಲಃ-**

**ಮರುವಿಚಾರಣೆ :ಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಓ ಹೇ ಕೇ ಸ ಇ**